ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಪಂಂಖ್ಯಮಂತ್ರಿಗಳು ಈ ವಿಷಯ ಸಾರ್ವತ್ರಿಕವಾಗಿ ಸಂಬಂಧಪಟ್ಟಂಥಾ ವಿಚಾರವೇನೂ ಅಲ್ಲ ಅನ್ನುವುದನ್ನು ಬಹಳ ಲಘುವಾಗಿ ಹೇಳಿದ್ದಾರೆ. ಅದರಂತೆ ನಡೆದುಕೊಂಡಿದ್ದಾರೆ. ಆದುದರಿಂದ ನಾನು ಈಗಲೂ ಕೂಡ ಹೇಳಬಯಸುತ್ತೇನೆ ಮಾನ್ಯ ಸಚಿವರಾ ದಂಥಾ ಇಬ್ರಾಹಿಂರವರ ಹತ್ರಿರ ರಾಜೀನಾಮೆ ತೆಗೆದುಕೊಂಡು ಆ ಬಗ್ಗೆ ಯೋಗ್ಯ ವಿಚಾರಣೆ ಮಾಡ ತಕ್ಕಂಥಾದ್ದಕ್ಕೆ ತಾವು ಅವಕಾಶ ಮಾಡಿಕೊಡಬೇಕು ಇಲ್ಲದೇ ಹೋದರೆ ನಾವು ಈಗ ಇಲ್ಲಿ ಧರಣಿ ಕೂಡುತ್ತೇನೆ.

(The hon. Members belonging to the Janata Party also entered the aisle and sat)

SRI A. LAKSHMISAGAR.—It is quite apparent that the Government wants to shield the alleged criminal who happens to be a Minister.

SRI H. GANGADHARAN.—As a protest· westage a walk-out. That is our code of conduct.

(Hon. Members belonging to B.J.P. with drew from the House)

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ನನ್ನನ್ನೂ ಕೂಡ ದೇವರಾಜ ಅರಸರ ಕಾಲದಲ್ಲಿ ೪ ಸಾರಿ ಹೊರಗೆ ಹಾಕಿದ್ದಾರೆ.

SRI K. BHASKAR NAIDU.—Mr. Speaker Sir· the House may be adjurned for half an hour.

ಅಧ್ಯಕ್ಷರು.—ವಿರೋಧ ಪಕ್ಷದವರು ಈ ವಿಚಾರವನ್ನು ಸವಿಸ್ತಾರವಾಗಿ ಪ್ರಸ್ತಾಪ ಮಾಡಲು ಅನುಕೂಲ ಮಾಡಿಕೊಡುವುದಕ್ಕಾಗಿ ರೂಲ್ ೫೦ ರಲ್ಲಾಗಲಿ ಅಥವಾ ೫೯ರ ಕೆಳಗೆ ಆಗಲಿ ಅವಕಾಶ ಮಾಡಿ ಕೊಡಬೇಕೇ ಎನ್ನುವ ವಿಚಾರ ನನ್ನ ಮುಂದೆ ಇತ್ತು. ತಮಗೆ ಹೇಳಬೇಕಾದರೆ ಈ ವಿಚಾರವನ್ನು ೫೦ರ ಕೆಳಗೆ ತೆಗೆದುಕೊಳ್ಳಬೇಕೆಂದು ರೂಲಿಂಗ್ ಕೊಡಬೇಕೆನ್ನುವ ಇಚ್ಛೆ ಇತ್ತು ಆದರೆ... ..

SRI B. B. SAYANAK.—I am on a Point of Order, Sir, When the House is not in order, how can.....

SRI MALLUR ANANDA RAO.—When the House is not in Order· how can raise a point of order ?

ಅಧ್ಯಕ್ಷರು.—ಈಗಲೂ ಕೂಡ ನಾನು ಹೇಳುತ್ತೇನೆ. ವಿರೋಧ ಪಕ್ಷದ ಸದಸ್ಯರು ಈ ಬಗ್ಗೆ ಕೋ ಅಪರೇಟ್ ಮಾಡಿದ್ದರೆ ಈ ವಿಷಯದಲ್ಲಿ ಇನ್ನೂ ಹೆಚ್ಚಿಗೆ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಅನುಕೂಲ ವಾಗುತ್ತಿತ್ತು. ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಬಹುದಾಗಿತ್ತು. ಆದರೆ ಆರೀತಿ ಮಾಡಿದೆ ಈ ರೀತಿಯಾಗಿ ಧರಣಿ ಕೂತಿರತಕ್ಕಂಥಾದ್ದು ಸರಿಯಾದುದಲ್ಲ ಎಂದು ಹೇಳುತ್ತೇನೆ. ಪಂತ್ತೊಂದು ಸಾರಿ ವಿರೋಧ ಪಕ್ಷದ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ ಏನೆಂದರೆ ತಾವುಗಳು ಬಂದು ತಮ್ಮ ತಮ್ಮ ಜಾಗದಲ್ಲಿ ಕೂತುಕೊಳ್ಳಬೇಕು ಎಂದು. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕಾರಣಗಳನ್ನು ಹೇಳಿದ ಮೇಲೆ ಆದರಲ್ಲೂ ಪ್ರಮುಖವಾಗಿ ಈ ಅಧಿಕಾರಿಗಳ ವರ್ಗಾವಣೆ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ ಮೇಲೂ ಕೂಡ ತಾವುಗಳು ಇದನ್ನು ಕೇಳಿಯೂ ಈ ರೀತಿಯಾಗಿ ಧರಣಿ ಕೂತುಕೊಳ್ಳುವುದು ಸರಿಯಾದು ದಲ್ಲ. ಆದುದರಿಂದ ತಾವುಗಳೆಲ್ಲರೂ ತಮ್ಮ ತಮ್ಮ ಜಾಗದಲ್ಲಿ ಬಂದು ಕೂತುಕೊಂಡು ಈ ಸದನದ ನಡವಳಿಕೆಗಳಲ್ಲಿ ಭಾಗವಹಿಸಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಈ ರೀತಿ ಮುತ್ತೊಂದು ಸಾರಿ ಆಗಬಾರದು ಎಂದು ಹೇಳಬಯಸುತ್ತೇನೆ.